**ಸಾಕ್ಷಿಯನ್ನು ದಿನಾಂಕಃ 24.10.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಕೆ.ಸಿ.ಎಸ್. ವಕೀಲರಿಂದಃ**

ನಾನು ಇನ್ನುಳಿದ ವಾದಿಯರ ಪರವಾಗಿಯೂ ಸಹ ಸಾಕ್ಷ್ಯ ನುಡಿಯುತ್ತಿದ್ದೇನೆ. ತಿಮ್ಮನಾಯಕನ ಮಗಳಾದ ಚಿಕ್ಕಮಣಮ್ಮ ತೀರಿಕೊಂಡಿದ್ದು, ಆಕೆಯ ಗಂಡ ಮತ್ತು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲವೆಂದರೆ ಸಾಕ್ಷಿಯು ಮಾಡಿರುತ್ತೇವೆಂದು ನುಡಿಯುತ್ತಾರೆ. ದಾವೆ ಹೂಡುವ ಕಾಲಕ್ಕೆ ಚಿಕ್ಕಮಣಮ್ಮ ಬದುಕಿದ್ದರು. ದಾವೆ ಹೂಡುವ ಕಾಲಕ್ಕೆ ಚಿಕ್ಕಮಣಮ್ಮ ಬದುಕಿದ್ದರು ಎಂದು ತಾವೇ ಹೇಳಿದ್ದು, ದಾವೆಯಲ್ಲಿ ಆಕೆಯನ್ನು ಪಕ್ಷಗಾರಳನ್ನಾಗಿ ಮಾಡಿಲ್ಲವೆಂದರೆ ಸರಿ. ನಿ.ಪಿ.-2 ರಿಂದ ನಿ.ಪಿ.-4 ರಲ್ಲಿರುವ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲವೆಂದರೆ ಸರಿ. 1 ನೇ ಪ್ರತಿವಾದಿ ನನಗೆ ದೊಡ್ಡಮ್ಮ ಆಗಬೇಕು. ಸದರಿ 1 ನೇ ಪ್ರತಿವಾದಿ ತಮಗೆ ಹೇಗೆ ದೊಡ್ಡಮ್ಮ ಆಗಬೇಕೆಂದರೆ ಸಾಕ್ಷಿಯು ಅವರು ನನ್ನ ತಂದೆಯ ಅಣ್ಣನ ಹೆಂಡತಿ ಎಂದು ನುಡಿಯುತ್ತಾರೆ. ನಮ್ಮ ತಂದೆಗೆ ನಾನು ಮತ್ತು ವಾದಿ-1 ಮತ್ತು ವಾದಿ-2 03 ಜನ ಮಕ್ಕಳು. ತಮ್ಮ ದೊಡ್ಡಪ್ಪ ವೆಂಕಟನಾಯಕರವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು 02 ಜನ ಎಂದು ನುಡಿಯುತ್ತಾರೆ. ಅವರುಗಳೆಂದರೆ ಗೋವಿಂದನಾಯಕ ಮತ್ತು ಚಿಕ್ಕಮ್ಮ. ದಾವಾ ಆಸ್ತಿಗಳು ತಮಗೆ ಹೇಗೆ ಬಂದಿರುತ್ತವೆಂದು ಕೇಳಲಾಗಿ ಸಾಕ್ಷಿಯು ಅದು ನಮ್ಮ ತಂದೆಗೆ ಬಂದಂತಹ ಪಿತ್ರಾರ್ಜಿತ ಸ್ವತ್ತುಗಳೆಂದು ನುಡಿಯುತ್ತಾರೆ. ನನ್ನ ತಂದೆಯ ಜೊತೆ ಒಡಹುಟ್ಟಿದವರು 04 ಜನ, ನಮ್ಮ ತಂದೆಯು ಸೇರಿ 05 ಜನ, ಅವರಲ್ಲಿ 02 ಗಂಡು ಮತ್ತು 03 ಹೆಣ್ಣು ಮಕ್ಕಳು. ತಮ್ಮ ತಂದೆ ಮತ್ತು ಅವರ ಸಹೋದರ-ಸಹೋದರಿಯರು ಆಸ್ತಿಯನ್ನು ವಿಭಾಗ

ಮಾಡಿಕೊಂಡಿರುತ್ತಾರಾ ಎಂದು ಕೇಳಲಾಗಿ ಸಾಕ್ಷಿಯು ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ತಮ್ಮ ತಂದೆಯ ಹೆಸರಿಗೆ ಇರುವ ದಾಖಲೆಗಳನ್ನೇನಾದರೂ ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಹಾಜರುಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ತಮ್ಮ ತಾತ ಯಾವಾಗ ತೀರಿಕೊಂಡಿರುತ್ತಾರಾ ಎಂದು ತಮಗೆ ಗೊತ್ತಾ ಎಂದರೆ ಸಾಕ್ಷಿಯು ಗೊತ್ತಿಲ್ಲವೆಂದು ನುಡಿಯುತ್ತಾರೆ. ತಮ್ಮ ತಾತ ತೀರಿಕೊಂಡ ನಂತರ ದಾವಾ ಆಸ್ತಿಗಳೇನಾದರೂ ತಮ್ಮ ದೊಡ್ಡಪ್ಪ ಮತ್ತು ತಮ್ಮ ತಂದೆಯ ಹೆಸರಿಗೆ ಖಾತೆ ಆಗಿರುತ್ತವೆಯಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಖಾತೆ ಬದಲಾವೆಯಾಗಿ ಸುಮಾರು 14-15 ವರ್ಷ ಆಗಿರಬಹುದು. ಬದಲಾವಣೆಯಾದ ನಂತರ ದಾಖಲೆಗಳನ್ನು ಪಡೆದುಕೊಂಡು ನೋಡಿರುತ್ತೀರಾ ಎಂದರೆ ಸಾಕ್ಷಿಯು ನೋಡಿರುವುದಿಲ್ಲವೆಂದು ನುಡಿಯುತ್ತಾರೆ. ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರುಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳನ್ನು ಹಾಜರುಮಾಡದಿದ್ದರೂ ಹಾಜರುಮಾಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ತಮ್ಮ ತಂದೆ ಹಾಗು ತಮ್ಮ ದೊಡ್ಡಪ್ಪ ಬದುಕಿರುವಾಗಲೇ ಅವರಿಗೆ ಸೇರಿದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ತಮ್ಮ ತಂದೆಗೆ ಮತ್ತು ತಮ್ಮ ದೊಡ್ಡಪ್ಪರವರಿಗೆ ಯಾವ ಸ.ನಂ. ನಲ್ಲಿ ಎಷ್ಟು ವಿಸ್ತೀರ್ಣದ ಆಸ್ತಿಗಳಿದ್ದವು ಎಂದು ತಮಗೆ ಗೊತ್ತಾ ಎಂದರೆ ಸಾಕ್ಷಿಯು ಗೊತ್ತಿಲ್ಲವೆಂದು ನುಡಿಯುತ್ತಾರೆ. ತಮ್ಮ ತಂದೆಗೆ ಮತ್ತು ತಮ್ಮ ದೊಡ್ಡಪ್ಪನ ಹೆಸರಿನಲ್ಲಿರುವ ಎಲ್ಲಾ ಆಸ್ತಿಗಳನ್ನು ಸೇರಿಸಿ ದಾವೆ ತಂದಿಲ್ಲವೆಂದರೆ ಸರಿ.

ತಮ್ಮ ತಂದೆ ಮತ್ತು ದೊಡ್ಡಪ್ಪ ಬದುಕಿರುವ ಕಾಲದಲ್ಲಿ ಪ್ರತ್ಯೇಕವಾಗಿ ಜಮೀನುಗಳನ್ನು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ, ಸಾಕ್ಷಿಯು ಮುಂದುವರಿದು ಆಸ್ತಿಗಳು ಜಂಟೀ ಖಾತೆಯಲ್ಲಿರುತ್ತವೆಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಮತ್ತು ಇನ್ನುಳಿದ ಆಸ್ತಿಗಳು ತಮ್ಮ ತಂದೆ ಮತ್ತು ತಮ್ಮ ದೊಡ್ಡಪ್ಪನ ಹೆಸರಿಗೆ ಜಂಟೀ ಖಾತೆಯಲ್ಲಿರುತ್ತವೆಂದು ತೋರಿಸಲು ಈ ಬಗ್ಗೆ ದಾಖಲೆ ಹಾಜರುಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಪ್ರತಿವಾದಿಗಳ ಕುಟುಂಬಕ್ಕೆ ಸೇರಿದ್ದು, ಅವರ ಆಸ್ತಿಗಳನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ನಾನು ಮತ್ತು ನನ್ನ ಸಹೋದರಿಯರು ಸೇರಿ ಸುಳ್ಳು ದಾವೆ ಹೂಡಿರುತ್ತೇವೆಂದರೆ ಸರಿಯಲ್ಲ. ಪ್ರತಿವಾದಿಗಳು ಸಹ ನಮ್ಮ ವಿರುದ್ಧ ದಾವೆ ಮಾಡಿರುತ್ತಾರೆಂದರೆ ಸರಿ. ದಾವಾ ಆಸ್ತಿಗಳಿಗು ಮತ್ತು ನಮಗು ಯಾವುದೇ ಸಂಬಂಧವಿಲ್ಲದಿದ್ದರು ಸುಳ್ಳು ದಾವೆ ಹೂಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**